ಕೃಷಿ ವಿಶ್ವ ವಿದ್ಯಾನಿಲಯ
ಕೃಷಿ ಹವಾಮಾನ ಕ್ಷೇತ್ರ ವಿಭಾಗ (IMD)
ಜಿ.ಕೆ.ವಿ.ಕೆ., ಬೆಂಗಳೂರು–560065

# * ಗ್ರಾಮೀಣ ಕೃಷಿ ಹವಾಮಾನ ಸೇವಾ ವರದಿ ಪತ್ರಿಕೆ *

**ದಿನಾಂಕ:** 06.06.2023

## ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೀಮಿತವಾಗಿದೆ

### ಈ ವಾರದ ಹವಾಮಾನ ಮುನ್ಸೂಚನೆ(ಭಾರತೀಯ ಹವಾಮಾನ ಇಲಾಖೆ)

### (ದಿನಾಂಕ 07-06-2023 ರಿಂದ 11-06-2023 ವರೆಗೆ)

| ನಿಯತಾಂಕಗಳು | 07.06.2023 | 08.06.2023 | 09.06.2023 | 10.06.2023 | 11.06.2023 |
|---|---|---|---|---|---|
| ಮಳೆ (ಮಿ ಮಿ) | 25 | 30 | 22 | 20 | 20 |
| ಗರಿಷ್ಠ ಉಷ್ಣಾಂಶ °(ಡಿ.ಸೆ. ) | 33 | 32 | 33 | 32 | 32 |
| ಕನಿಷ್ಠ ಉಷ್ಣಾಂಶ (ಡಿ.ಸೆ. ) | 21 | 20 | 20 | 20 | 20 |
| ಮೋಡ (ಪ್ರಮಾಣ) | 6 | 8 | 7 | 6 | 6 |
| ಅರ್ದ್ರತೆ 7.20  బె (ಶೇ) | 79 | 80 | 81 | 81 | 78 |
| ಅರ್ದ್ರತೆ 2.20 ಮ (ಶೇ) | 40 | 43 | 38 | 39 | 42 |
| ಗಾಳಿಯ ವೇಗ (ಕಿ.ಮಿ/ಗಂಟೆಗೆ) | 17 | 19 | 18 | 18 | 20 |
| ಗಾಳಿಯ ದಿಕ್ಕು ( ಡಿಗ್ರಿ) | 255 | 252 | 252 | 270 | 249 |

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಮುಂದಿನ ನಾಲ್ಕೈದು ದಿನಗಳಲ್ಲಿ ಹಗುರದಿಂದ ಸಾದಾರಣ ಮಳೆಯಾಗುವ ಸಾದ್ಯತೆ ಇದೆ. ದಿನದ ಗರಿಷ್ಠ ಉಷ್ಣಾಂಶ **32.0-33.0$^{o}$C** ಮತ್ತು ಕನಿಷ್ಠ **20.0-21.0$^{o}$C** ಇರುವ ಸಾಧ್ಯತೆ ಇದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ **78-81 %** ಇದ್ದು ಮಧ್ಯಾಹ್ನ **38-43 %** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **17-20** ಕಿ.ಮೀ. ವೇಗದಲ್ಲಿ ಬೀಸುವ ಸ0ಭವವಿದೆ.

- ಮೃಗಶಿರ ನಕ್ಷತ್ರದ ಮಳೆಯ ಕಾಲವು ಜೂನ್ ತಿಂಗಳ 08 ರಿಂದ ಜೂನ್ 21 ರ ವರೆಗೆ ಇರುತ್ತದೆ. ಈ ನಕ್ಷತ್ರದ ಪೂರ್ವ ಒಣ ವಲಯದ ಸರಾಸರಿ ಮಳೆಯು 34.9 ಮಿ.ಮೀ. ವರೆಗೆ ಮಳೆಯಾಗುತ್ತದೆ.

### ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

| ಬೆಳೆಗಳು | ಬೆಳೆಯ ಹಂತ | ಕೃಷಿ ಸಲಹೆಗಳು |
|---|---|---|
| **ಸಾಮಾನ್ಯ** | | • ಮುಂಬರುವ ಬಿತ್ತನೆಗೆ ಅಗತ್ಯವಿರುವ ಬಿತ್ತನೆ ಬೀಜಮಾದರಿ0ಯನ್ನು ಬೀಜಪರೀಕ್ಷಾಲ0ಯಕ್ಕೆ ಕಳುಹಿಸುವ ಮೂಲಕ ಮೊಳಕೆ ಪ್ರಮಾಣದ ಸಾಮರ್ಥ್ಯ ತಿಳಿದುಕೊಳ್ಳುವುದು.<br>• ಉತ್ತಮ ಮಳೆಯ ಮುನ್ಸೂಚನೆ ಇರುವುದರಿಂದ ಖುಷ್ಕಿ ಜಮೀನಿನಲ್ಲಿ ಬದು ಮತ್ತು ಬಸಿಗಾಲುವೆಗಳನ್ನು ಸ್ವಚ್ಛ ಮಾಡುವುದು ಹಾಗು ಕೃಷಿ ಹೊಂಡಗಳನ್ನು ದುರಸ್ತಿಗೊಳಿಸಿ ನೀರು ನಿಧಾನವಾಗಿ ಹರಿಯುವಂತೆ ಮಾಡುವುದು ಮಣ್ಣಿನ ಸವಕಳಿ ತಪ್ಪಿಸಿ ಹಾಗು ಮಣ್ಣಿನ ಸಂರಕ್ಷಣೆ ಮಾಡುವುದು.<br>• ಮುಂಗಾರು ಹಂಗಾಮಿಗೆ ಸಿದ್ದತೆಗೊಳ್ಳುತ್ತಿರುವ ಈ ಸಂದರ್ಭದಲ್ಲಿ ರೈತರು ತಮ್ಮ ಜಮೀನಿನಲ್ಲಿ ಅಂತರ ಬದು ಪ್ರದೇಶದ ಉಬ್ಬು ತಗ್ಗುಗಳನ್ನು ಸಮ ಮಾಡಿ, ಬದುಗಳನ್ನು ಭದ್ರ ಪಡಿಸುವುದರಿಂದ ಫಲವತ್ತಾದ ಮೇಲ್ಮಣ್ಣು ಕೊಚ್ಚುವಿಕೆ ತಡೆಯಬಹುದು ಹಾಗೂ ಮಳೆ ನೀರು ಮತ್ತು ತೇವಾಂಶ ಸಮಾನ ಹಂಚಿಕೆಯಾಗುವಂತೆ ಮಾಡಿ ತಗ್ಗುಗಳಲ್ಲಿ ನೀರು ನಿಲ್ಲುವುದನ್ನು ನಿಯಂತ್ರಿಸಿ ಮಳೆಯಾಶ್ರಿತ ಬೆಳೆಗಳಲ್ಲಿ ಉತ್ತಮ ಇಳುವರಿ ಪಡೆಯಬಹುದು.<br>• ಕೆರೆಗಳಲ್ಲಿ ಗೋಡು ಮಣ್ಣನ್ನು ತೆಗೆದು ಭೂಮಿಗೆ ಸೇರಿಸುವುದರಿಂದ ಭೂಮಿಯ ಫಲವತ್ತತೆಯನ್ನು ಹೆಚ್ಚಿಸಬಹುದು |

| | | |
|---|---|---|
| **ಮುಂಗಾರು ಬೆಳೆಗಳು** | ಬಿತ್ತನೆ ಮತ್ತು ಮೊಳಕೆ ಹಂತ | **ಏಕಬೆಳೆ ಪದ್ಧತಿಯಲ್ಲಿ ಈ ಕೆಳಗಿನ ದೀರ್ಘಾವಧಿ ತಳಿಗಳನ್ನು ಬಿತ್ತನೆ ಮಾಡಲು ಸೂಚಿಸಲಾಗಿದೆ**<br>ತೊಗರಿ : ಟಿ.ಟಿ.ಬಿ–7, ಬಿ.ಆರ್.ಜಿ–1,2,4ಮತ್ತು 5<br>ಹರಳು: ಡಿ.ಸಿ.ಎಸ್–9 (ಜ್ಯೋತಿ), ಡಿ.ಸಿ.ಎಚ್–177 ಮತ್ತು 32<br>ಮುಸುಕಿನ ಜೋಳ: ಗಂಗಾ–11, ಡೆಕ್ಕನ್–103, ವಿಜಯ ಕಾಂಪ್ರೋಸಿಟ್, ಕಾಂಪ್ರೋಸಿಟ್ ಎನ್.ಎ.ಸಿ–6004,6002, ನಿತ್ಯಶ್ರೀ–ಸಂಕರಣ ತಳಿ.<br>**ಎರಡುಬೆಳೆ ಪದ್ದತಿಯಲ್ಲಿ ಈ ಕೆಳಗಿನ ಮಧ್ಯಮಾವಧಿ ಮತ್ತು ಕಡಿಮೆ ಅವಧಿ ತಳಿಗಳನ್ನು ಬಿತ್ತನೆ ಮಾಡಲು ಸೂಚಿಸಲಾಗಿದೆ**<br>ನೆಲಗಡಲೆ: ಟಿ.ಎಂ.ವಿ–2, ಜೆ.ಎಲ್–24 ಮತ್ತು ಕೆ.ಸಿ.ಜಿ–6<br>ಅಲಸಂದೆ : ಟಿ.ವಿ.ಎಕ್ಸ್–944, ಕೆ.ಬಿ.ಸಿ–1<br>ಹೆಸರು :ಪಿ.ಎಸ್–16, ಪಿ.ಡಿ.ಎಮ್–84, 178 , ಉದ್ದು: ಕರಗಾವ್–3, ಟಿ–9, ರಶ್ಮಿ<br>ತೊಗರಿ ಬಿತ್ತನೆಗೆ ಮುಂಚೆ ಬೀಜೋಪಚಾರ ಮಾಡುವುದು ಉತ್ತಮ, ಕಾರ್ಬೆನ್‌ಡೈಜಿಮ್ ಅಥವಾ ಥೈರಾಮ್ @ 2 ಗ್ರಾಂ/ ಪ್ರತಿ ಕೆ.ಜಿ ಬೀಜಕ್ಕೆ ಉಪಚರಿಸಿ, ಮತ್ತು ಜೈವಿಕ ಕೀಟನಾಶಕಗಳಾದ ಟ್ರೈಕೋಡರ್ಮ ವಿರಿಡೆ @ 4 ಗ್ರಾಂ/ ಪ್ರತಿ ಕೆ.ಜಿ ಬೀಜಕ್ಕೆ ಅಥವಾ ಸುಡೋಮೋನಾಸ್ ಫ್ಲುರೆಸೆನ್ಸ್ @ 10 ಗ್ರಾಂ/ ಪ್ರತಿ ಕೆ.ಜಿ ಬೀಜಕ್ಕೆ ಮತ್ತು ರೈಜ಼ೋಬಿಯಂ @ 10 ಗ್ರಾಂ/ ಪ್ರತಿ ಕೆ.ಜಿ ಬೀಜಕ್ಕೆ ಬೆರೆಸಿ ಉಪಚರಿಸಿ. |
| **ಮಾವು** | ಮಾಗುವ ಮತ್ತು ಕಟಾವು ಹಂತ | 1. ಮಾವಿನ ಬೆಳೆಗಳಲ್ಲಿ ಹಣ್ಣು ನೊಣದ ನಿಯಂತ್ರಣಕ್ಕಾಗಿ ಕಾರ್ಬರಿಲ್ 4 ಗ್ರಾ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಣೆ ಮಾಡಿ.<br>2. ಹಣ್ಣನ್ನು ಕಟಾವು ಮಾಡುವ ಸಮ0ಯದಲ್ಲಿ ನೆಲಕ್ಕೆ ತಾಗದ ರೀತಿ ಎಚ್ಚರ ವಹಿಸಿ. ಇದರಿಂದ ಕಟಾವಿನ ನಂತರ ಶಿಲೀಂಧ್ರದಿಂದ ಬರುವ ಹಲವಾರು ರೋಗಗಳನ್ನು ತಡೆ0ಯಬಹುದು.<br>3. ಮಾವು ಬೆಳೆಗಾರರು ಚೆನ್ನಾಗಿ ಬಲಿತು ಕಟಾವಿಗೆ ಬಂದಿರುವ ಮಾವಿನ ಕಾಯಿಯನ್ನು ಕಟಾವು ಮಾಡುವಾಗ ಒಂದು ಇಂಚು ತೊಟ್ಟನ್ನು ಬಿಟ್ಟು ಕಟಾವು ಮಾಡಬೇಕು. ನಂತರ ಮಾವಿನ ಕಾಯಿಗಳನ್ನು ಪ್ಲಾಸ್ಟಿಕ್ ಕ್ರೇಟಿನಲ್ಲಿ ಪೇಪರ್ ಹಾಕಿ ಜೋಡಿಸಬೇಕು. ಕಟಾವು ಮಾಡಿದ 24 ಗಂಟೆಯ ನಂತರ ಕ್ರೇಟ್‌ಗಳನ್ನು ಒಂದರ ಮೇಲೋಂದರಂತೆ 5 ರಿಂದ 6 ಕ್ರೇಟ್‌ಗಳನ್ನು ಅರ್ಧ ಅಡಿ ಅಂತರದಲ್ಲಿ ಜೋಡಿಸಿ ಮದ್ಯದಲ್ಲಿ ಸಣ್ಣ ಪ್ಲಾಸ್ಟಿಕ್ ಲೋಟಗಳಲ್ಲಿ 300 ಮಿ.ಲೀ. ನೀರಿನಲ್ಲಿ 10 ಮಿ.ಲೀ. ಎಥಿಲಿನ್ ದ್ರಾವಣ ಹಾಕಿ ನಂತರ 10 ಗ್ರಾಂ ನಷ್ಟು ಕಾಸ್ಟಿಕ್ ಸೋಡ (Sodium hydroxide) ಹಾಕಿಡಬೇಕು. ನಂತರ ಟಾರ್ಪಾಲ್‌ನಿಂದ ಗಾಳಿಯಾಡದಂತೆ ಭದ್ರವಾಗಿ ಮುಚ್ಚಬೇಕು. ಹೀಗೆ ಮಾಡಿದ 48 ಅಥವಾ 60 ಗಂಟೆಯ ನಂತರ ಟಾರ್ಪಾಲ್ ತೆಗೆದು ಗಾಳಿಯಾಡಲು ಬಿಡಬೇಕು. 1 ಟನ್ ಹಣ್ಣಿಗೆ 8 ರಿಂದ 10 ಗ್ಲಾಸ್‌ಗಳಲ್ಲಿ ಎಥಲಿನ್ ಇಡಬೇಕು. ಈ ರೀತಿಯಾಗಿ ನೈಸರ್ಗಿಕವಾಗಿ ಮಾಗಿಸುವುದರಿಂದ ಗುಣಮಟ್ಟದ ಹಣ್ಣನ್ನು ಪಡೆಯುವುದರ ಜೊತೆಗೆ ಉತ್ತಮ ಮಾರುಕಟ್ಟೆ ದರವನ್ನು ಪಡೆಯಬಹುದು. |
| **ಪಶುಸಂಗೋಪನೆ** | | 1. **ಚಪ್ಪೆ ರೋಗ :** ಈ ರೋಗವು ಬ್ಯಾಕ್ಟೀರಿಯಾದಿಂದ ಹರಡುತ್ತದೆ.<br>2. ಈ ರೋಗವು ದನ, ಎಮ್ಮೆ, ಕುರಿಗಳಲ್ಲಿ ಹರಡುತ್ತದೆ. ಸಾಮಾನ್ಯವಾಗಿ ಈ ರೊಗವು ಮಳೆಗಾಲದ ಕೊನೆಯಲ್ಲಿ ಕಾಣುತ್ತದೆ. ಚಪ್ಪೆ ರೋಗದ ಲಸಿಕೆಯನ್ನು ಪ್ರತಿ ವರ್ಷವೂ ಜೂನ್/ಜುಲೈ ತಿಂಗಳಲ್ಲಿ ಮಾಡಿಸುವುದು.<br>3. ಹೆಚ್ಚು ಕರಾವು ಕೊಡುವ ರಾಸುಗಳ ಆಹಾರದಲ್ಲಿ ಕನಿಷ್ಠ ಶೇ. 17 ರಷ್ಟು ನಾರಿನ ಅಂಶವಿರಬೇಕು ( ಎನ್.ಡಿ.ಎಫ್. ಶೇ.22 ರಷ್ಟಿರಬೇಕು.)<br>4. ಹೆಚ್ಚು ಪಶು ಆಹಾರ ತಿನ್ನಿಸುವ ಸಮಯದಲ್ಲಿ ಅದನ್ನು 3–4 ಸಮಭಾಗ ಮಾಡಿ ನಿತ್ಯ ನಾಲ್ಕು ಬಾರಿ ತಿನ್ನಿಸುವುದು ಉತ್ತಮ.<br>5. ಬೆಳೆಯಲ್ಲಿ ಶೇ. 65–70 ರಷ್ಟು ತೇವಾಂಶ ಇರಬೇಕು. ತೇವಾಂಶ ಇದಕ್ಕಿಂತಲೂ ಕಡಿಮೆಯಾದರೆ ಹುದುಗುವಿಕೆ ವಿಫಲಗೊಂಡು ಕಳಪೆ ಗುಣಮಟ್ಟದ ಕಂದು ಬಣ್ಣದ ರಸಮೇವು ತಯಾರಾಗುತ್ತದೆ. ಇದೇ ರೀತಿ ಮೇವಿನಲ್ಲಿ ತೇವಾಂಶ ಶೇ.70 ಕ್ಕಿಂತಲೂ ಹೆಚ್ಚಿದ್ದರೆ ರಸಸಾರ ಹೆಚ್ಚಾಗಿ ಮೇವು ಹುಳಿಯಾಗಿ ಕೊಳೆತ ವಾಸನೆಯಿಂದ ಕೂಡಿರುತ್ತದೆ. |


**ನೋಡಲ್ ಅಧಿಕಾರಿ:**

ಕೃಷಿ ಹವಾಮಾನ ವಿಭಾಗ

**ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು**


**ಮೊಬೈಲ್ ಆಫ್:**

- ರೈತರು "ದಾಮಿನಿ" ಎಂಬ ತಂತ್ರಾಂಶವನ್ನು ಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್ ಲೋಡ್ ಮಾಡಿಕೊಂಡರೆ ಇದರಿಂದ ಮಿಂಚಿನ ಮನ್ಸೂಚನೆಯನ್ನು ಅತ್ಯಂತ ನಿಖರವಾಗಿ ತಿಳಿಯಬಹುದು.
- ಹಾಗೆಯೇ "ಮೌಸಮ್" ಮತ್ತು "ಮೇಘದೂತ್" ತಂತ್ರಾಂಶಗಳಿಂದ ಮಳೆಯ ಮುನ್ಸೂಚನೆ ಮತ್ತು ಕೃಷಿ ಸಲಹೆಗಳನ್ನು ಪಡೆಯಲು ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗೆ *mausam.imd.gov.in* ಜಾಲತಾಣದಲ್ಲಿ ಮಾಹಿತಿ ಪಡೆಯಿರಿ.